DC-343
T.P-2

(1)

Reg B G No. 155 18 - 10 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನ್ಯೆಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16–00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನ್ಯೆಸೆ

ಭಾನುವಾರ ರಜೆ ಆಚರಿಸಲು ಮುಖ ಮಂತ್ರಿಗಳ ಸೂಚನೆ

ಸತ್ಯವಾದಿ "ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವಾ ರವರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರ 4.

ನೋಸಗಾರ ಸಿಕ್ಕಿಬಿದ್ದ

ಬೊಂಬಾಯಿ— ತಾನು ಸೈನ್ಯದ ಮೇಜರ್ ಎಂದೂ, ಸ್ಕೂಟರುಗಳನ್ನು ಕೊಡಿಸುತ್ತೇನೆಂದೂ, ಅನೇಕರಿಂದ ಹಣ ಸೆಳೆದು ಮೋಸಮಾಡುತ್ತಿದ್ದ ಭಾಬೆಯಾ ಉರುಫ್ ರಾನಡೇ ಎಂಬುವನು ದಸ್ತಗಿರಿ ಮಾಡಲ್ಪಟ್ಟನು.

ಅಪೂರ್ವ ಅಂಚೆಚೀಟಿ

1847 ರ ಮಾರಿಷಸ್ಸಿನ ಒಂದು ಪೆನ್ನಿ ಸ್ಟಾಂಪ್ ಲಂಡನ್ನಿ ಬಹು ಭದ್ರವಾದ ಕಾವಲಿನಿಂದ ಲಂಡನ್ನಿಗೆ ತರಲಾಯಿತು – ಇದು ಅಮೇರಿಕಾಕ್ಕೆ ಕಳುಹಿಸಲ್ಪಟ್ಟು ಅಲ್ಲಿ ತಾ॥ 21 ರಂದು ಹರಾಜು ಹಾಕಲ್ಪಡುವುದು – ಇದನ್ನು 180000 ಕ್ಕೆ ಇನ್ಷೂರ್ಮಾಡಲಾಗಿದೆ – 1 ಲಕ್ಷ ಪೌಂಡು ಬೆಲೆ ಬಾಳುವದೆಂದು ಹೇಳಲಾಗಿದೆ.

ಉಚಿತ ಗೋಧಿ

ಮೈಸೂರು— ಜಿಲ್ಲೆಯ ಅಭಾವ ಪೀಡಿತ ಭಾಗಗಳಲ್ಲಿ 156 ಟ್ಗ ಗೋಧಿಯನ್ನು ಉಚಿತವಾಗಿ ಹಂಚಲಾಯಿತು.

ಸಾಹಿತ್ಯ ಸಮ್ಮೇಳನ

ಈ ವರ್ಷ 47 ನೇ ಸಾಹಿತ್ಯ ಸಮ್ಮೇಳನವು ಗುಲ್ಬರ್ಗದಲ್ಲಿ ನಡೆಯಲಿದೆ.

ಲಂಚ ತಿಂದ ಪೋಲೀಸ್ ಅಧಿಕಾರಿ

ಕರ್ನೂಲು— ಗೂಡೂರಿನ ಪೋಲೀಸ್ ಸಬ್ ಇನ್ಸ್ಪೆಕ್ಟರ್ ರೂ. 300 ಲಂಚ ಸ್ವೀಕರಿಸುತ್ತಿದ್ದಾಗ ಹಿಡಿಯಲ್ಪಟ್ಟನು.

ತುಲಾ ಸಂಕ್ರಮಣ

ನಿನ್ನೆ ಭಾಗಮಂಡಲದಲ್ಲಿ ತುಲಾ ಸಂಕ್ರಮಣದಲ್ಲಿ ಸುಮಾರು 10000 ಜನ ಸ್ನಾನಮಾಡಿದರು.

ವಿಶ್ರಾಂತಿ ದಿನ

ಬೆಂಗಳೂರು—ಪ್ರತಿ ಭಾನುವಾರ ಮಂತ್ರಿಗಳು ಭಾನುವಾರ ವಿಶ್ರಾಂತಿ ದಿನವನ್ನಾಗಿ ಆಚರಿಸಿ, ಏನೊಂದು ಹೊರಗಿನ ಕಾರ್ಯಕ್ರಮವನ್ನಿಟ್ಟುಕೊಳ್ಳದಿರುವುದು ಹಿತಕರವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ವ್ಯಕ್ತಪಡಿಸಿದರು.

ಮುಷ್ಕರಿಸಿದವರಿಗೆ ಕರುಣೆಯೇ ?

ನವದೆಹಲಿ— ಸೆಪ್ತಂಬರು 19 ರಂದು ಮುಷ್ಕರ ನಡೆಸಿದ ಕೇಂದ್ರ ಸರಕಾರದ ನೌಕರರ ವಿಷಯದಲ್ಲಿ ದಯೆತೋರುವ ಬಗ್ಗೆ ನಿರ್ಧರಿಸಲು ಇಂದು ಮಂತ್ರಿಮಂಡಲದ ವಿಶೇಷ ಸಭೆ ಏರ್ಪಡಿಸಲಾಗಿದೆ.

★

ಪ್ರಧಾನಿಗಳ ಆಗಮನ

ನವದೆಹಲಿ— ತಮ್ಮ ಮೂರು ವಾರಗಳ ದಕ್ಷಿಣ ಅಮೇರಿಕಾ ಪ್ರವಾಸ ಮುಗಿಸಿಕೊಂಡು ಪ್ರಧಾನಿ ಇಂದಿರಾರವರು ನಿನ್ನೆ ವಾಪಸ್ಸಾದರು.

ಮತ್ತೊಂದು ಸಮ್ಮೇಳನ

ಶ್ರೀನಗರ— ಷೇಕ್ ಅಬ್ದುಲ್ಲರು ಕರೆದಿದ್ದ 6 ದಿನಗಳ ಜನತಾ ಸಮ್ಮೇಳನವು ನಿನ್ನೆ ಮುಕ್ತಾಯಗೊಂಡಿತು.

★

ಕೇಂದ್ರದ ನೆರವು

ಬೊಂಬಾಯಿ— ಅಭಾವಪೀಡಿತ ಭಾಗಗಳಲ್ಲಿಯ ರೈತರಿಗೆ ಬೀಜಗಳನ್ನು ಕೊಳ್ಳಲು ತಕಾವಿ ಸಾಲವಾಗಿ ಕೊಡುವುದಕ್ಕೋಸ್ಕರ ಕೇಂದ್ರವು ರಾಜ್ಯ ಸರಕಾರಕ್ಕೆ ರೂ. 60 ಲಕ್ಷ ಮಂಜೂರಾಗಿಸಿ.

ಗೌರ್ನರರಿಂದ ಬೆದರಿಕೆ

ತ್ರಿವೇಂದ್ರಂ— ಗೌರ್ನರರು ತಮಗೆ ಬೆದರಿಕೆ ಹಾಕಿದರೆಂದು ಮುಖ್ಯ ಮಂತ್ರಿ ನಂಬೂದರಿಪಾದರು ಹೇಳಿದರು.

ಮೈಸೂರು ದಸರಾ ವಸ್ತುಪ್ರದರ್ಶನ 1968

ವಿಶೇಷ ಮನರಂಜನೆಯ ಕಾರ್ಯಕ್ರಮ

ದಿನಾಂಕ 20 ನೇ ಭಾನುವಾರ ಅಕ್ಟೋಬರ್ 1968

ಸಂಜೆ 7 ಘಂಟೆಗೆ

ಸುಪ್ರಸಿದ್ಧ ಚಲನಚಿತ್ರ ತಾರೆ

ಶ್ರೀಮತಿ ಎಂ. ವಿ. ಲಕ್ಷ್ಮೀದೇವಿಯವರ ತಂಡದವರಿಂದ

ಆರಾಧನ

ಎಂಬ ನಾಟಕವನ್ನು ಅಭಿನಯಿಸುವರು.

ತಾರಾಗಣ : ಶ್ರೀಮತಿಯರಾದ ಎಂ. ವಿ. ಲಕ್ಷ್ಮೀದೇವಿ, ಬಿ. ಜಯ, ಎಸ್. ಸರೋಜಮ್ಮ, ಜಯಮ್ಮ, ಕಲಾವತಿ, ಸಿ. ವಿ. ಸರೋಜಿನಿ ಪಟ್ಟಾಭಿ. ಶ್ರೀಯುತರಾದ ಟಿ. ವಿ. ಬಾಲಕೃಷ್ಣ, ಹೆಚ್ ಆರ್. ಶಾಸ್ತ್ರಿ, ಬಿ. ಗುರುರಾಜ್, ಜೀತನ್, ಶ್ಯಾಮಸುಂದರ್, ಟಿ. ಆರ್. ನಾರಾಯಣ, ಮಾಸ್ಟರ್ ಚಂದ್ರಶೇಖರ್.

ಪ್ರವೇಶದರ 50 ನ್ಯೆಸೆ

ರಗ್ಗು, ಶಾಲು, ಮಫ್ಲರ್ ಮತ್ತು ಸ್ವೆಟರ್ಗಳಿಗೆ ಬ್ಯಾಂಕ್ ರೋಡ್ ಬಾಹುಪಾರ್. ಒಂದೇ ಬೆಲೆ, ನ್ಯಾಯವಾದ ಬೆಲೆ ನುಶ್ತು ನಿಮಗೆ ಅನುಕೂಲವಾದ ಬೆಲೆಗೆ ಹೆಸರುವಾಸಿಯಾದ ಅಂಗಡಿ.

ಹಿಂದೂಗಳ ಆಚಾರ

ಗ್ರಾಹಕರು – ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಇದರಿಂದ ಸೂಕ್ಷ್ಮವಾಗಿ ಗಮನಿಸಿದಲ್ಲಿ ಆಚಾರಗಳು ಬಹುತೇಕವಾಗಿ ಹಿಂದು ಸಮಾಜಕ್ಕೆಲ್ಲಾ ಒಂದೇ ಇರುತ್ತದೆ. ವರ್ಣಾಶ್ರಮಧರ್ಮ ಮತ್ತು ಮೋಕ್ಷಧರ್ಮದಲ್ಲಿ ಮಾತ್ರವೇ ಭಿನ್ನತೆ ಇರುತ್ತವೆ. ಆದರೆ ಈ ಭಿನ್ನತೆಗಳು ವ್ಯಕ್ತಿಯ ಅರ್ಹತೆಗೆ ತಕ್ಕಂತೆ ಆಚರಿಸಲು ಅನುಕೂಲವಾಗುವುದಕ್ಕಾಗಿಯೇ ಹೊರತು ಜಗಳ ಕಾಯುವುದಕ್ಕಲ್ಲ. ಶಾಸ್ತ್ರಗಳನ್ನು ಅಧ್ಯಯನ ಮಾಡದೇ 'ಅಯ್ಯಂಗಾರ್ಯರಿಗೆ ಮಡಿಯೇ ಇಲ್ಲ, ಅವರು ಕೋಲಿನಿಂದ ಮಡಿಬಟ್ಟೆ ತೆಗೆದುಕೊಳ್ಳುತ್ತಾರೆ " ' ಮಾಧ್ವರು ಒದ್ದೇ ಬಟ್ಟೆ ಉಟ್ಟುಕೊಂಡು ದೇವರಪೂಜೆ ಮಾಡುತ್ತಾರೆ " ' ಸ್ಮಾರ್ತರು ಏಕಾದಶಿ ದಿವಸ ಶ್ರಾದ್ಧ ಮಾಡುತ್ತಾರೆ " ಎಂಬ ಈ ರೀತಿಯ ಮಾತುಗಳನ್ನಾಡುವುದರಿಂದ ಭಿನ್ನತೆ ಹೆಚ್ಚುತ್ತದೆ : ಆಚಾರಗಳನ್ನು ಅನುಸರಿಸುವುದರಿಂದಲ್ಲ.

○

ಶ್ರೀ ಧನ್ವಂತರಿ ಜಯಂತಿ ಮತ್ತು ಸನ್ಮಾನ ಸಮಾರಂಭ

ಮೈಸೂರು ಆಯುರ್ವೇದ ಸಂಘದವರು ತಾ|| 20 ರಂದು ಶ್ರೀಮನ್ಮಹಾರಾಜರವರ ಸ್ಮೃತ ಮಹಾಪಾಠಶಾಲೆಯ ಆವರಣದಲ್ಲಿ ನಡೆಸಲು ಏರ್ಪಡಿಸಿರುವ ಶ್ರೀ ಧನ್ವಂತರಿ ಜಯಂತಿ ಮತ್ತು ಸನ್ಮಾನ ಸಮಾರಂಭದಲ್ಲಿ ಶ್ರೀಮನ್ಮಹಾರಾಜರವರ ಆಂಡರ್ ಸೆಕ್ರಿಟರಿಯವರಾದ ಶ್ರೀ ಎಂ. ಕೃಷ್ಣಮೂರ್ತ್ಯಾಚಾರ್ಯ, ಬಿ. ಎ. ಯವರು ಮುಖ್ಯ ಅತಿಥಿಗಳಾಗಿದ್ದು, ಸಭೆಯ ಉದ್ಘಾಟನೆಯನ್ನೂ ವಿದ್ವತ್ಪ್ರಶಸ್ತಿ ವಿತರಣವನ್ನೂ ನೆರವೇರಿಸುವರು.

★

ಶ್ರೀ ಕೃಷ್ಣಜನ್ಮಾಷ್ಟಮಿ ಉತ್ಸವ

ಬರೋಡಾ ಜಿಲ್ಲೆಯಲ್ಲಿ ಫರ್ಟಿಲೈಜರ್‌ನಗರದಲ್ಲಿ 16–8–68 ರಂದು ಶ್ರೀ ಕೃಷ್ಣಜನ್ಮಾಷ್ಟಮಿ ಉತ್ಸವವು ಹಿಂದೂ ಸಾಂಪ್ರದಾಯಕ ರೀತಿಯಲ್ಲಿ ವಿದ್ಯುಚ್ಛಕ್ತಿಯಿಂದ ತೂಗಲಾದ ಸುಂದರ ತೊಟ್ಟಿಲಿನಲ್ಲಿ ಆಕರ್ಷಣೀಯವಾದ ಸುಂದರ ಕೃಷ್ಣ ವಿಗ್ರಹವನ್ನಿಟ್ಟು ಉತ್ಸವವು ವೈಭವನಾಗಿ ನೆರವೇರಿಸಲ್ಪಟ್ಟಿತು. ಬರೋಡಾದ ಖ್ಯಾತ ಭಜನೆಗಾರ ಶ್ರೀ ಜಗದೀಶ್ ಪಟೇಲ್ ' ರಾಹಿ " ರವರ ಭಜನೆಯ ಕಾರ್ಯಕ್ರಮದ ಏರ್ಪಾಟಿತ್ತು.

ಮೈಸೂರು ದಸರಾ ವಸ್ತುಪ್ರದರ್ಶನ 1968

ವಿಶೇಷ ಮನರಂಜನೆಯ ಕಾರ್ಯಕ್ರಮ

ದಿನಾಂಕ 19 ನ್ನೇ ಅಕ್ಟೋಬರ್ 1968 ನೇ

ಶನಿವಾರ ಸಂಜೆ 7 ಘಂಟೆಗೆ

ಕು ಮಾ ರಿ ಚಂ ದ್ರ ಕ ಲಾ

ಮದ್ರಾಸ್‌ರವರಿಂದ-

" ತಿಮೋಘ ನೃತ್ಯ "

ವಸ್ತು ಪ್ರದರ್ಶನದ ಕಲಾಕ್ಷೇತ್ರದಲ್ಲಿ ಏರ್ಪಡಿಸಿರುತ್ತೆ.

ಪ್ರವೇಶ ದರ : 50 ಪೈಸೆ.

Edited, Printed & Published by Dharmapracharu Nirata M S Krishna Rao (Proprietor) at the Satyavadi Press Chamarajpuram, Mysoe 4

ವುಡ್‌ಲಾಂಡ್ಸ್ ಜನಪ್ರಿಯ 6 ನೇ ವಾರ

ವೈಭವ ಆರಂಭ

ಮನಮೋಹಕ ಹಿಂದಿ ಚಿತ್ರ — — ಈಸ್ಟ್‌ಮನ್ ಕಲರ್

ನೀಲ್ ಕಮಲ್ ★ Neel Kamal

.... ಮಿಲಿಯಗಟ್ಟಲೆ ರೂಪಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರೆಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್ ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಅಪೆರ— ಜನಭರಿತ 2 ನೇ ವಾರ

ಮನಮೋಹಕ ತಮಿಳು ಚಿತ್ರ — — ದಿನವಹಿ 3 ಆಟಗಳು

ನೇರ್‌ವಳಿ

ನಟವರ್ಗ– ಜಯಶಂಕರ್, ಆನಂದ್, ಮನೋಹರ್, ನಾಗೇಶ್, ಸುಂದರರಾಜ್ ವಾಣಿಶ್ರೀ, ಚಂದ್ರಿಕಾ, ಮನೋರಮ, ವಿಜಯಲಲಿತ

Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

Protect the Cow



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ